ದಿನಾಂಕಃ **03.06.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಮಾನ್ಯ ಶ್ರೀ. ಬಿ ಸಿ ಎಸ್ ರವರಿಂದಃ**

ನಾನು ಈ ಪ್ರಕರಣವನ್ನು ದಾಖಲು ಮಾಡುವ ಸಮಯದಲ್ಲಿ ನನಗೆ ಅಂದಾಜು **60-61** ವರ್ಷ ವಯಸ್ಸಾಗಿತ್ತು. ನಾನು ಆರೋಪಿಗೆ ದಿ.**17.07.2020** ರಂದು ನೋಟಿಸ್ ಕೊಟ್ಟಿರುತ್ತೇನೆ. ಆರೋಪಿ ನನಗೆ ಯಾವುದೇ ಪ್ರತ್ಯುತ್ತರ ಕಳುಹಿಸಿಲ್ಲ. ಆರೋಪಿಗೆ ನೋಟಿಸ್ ಕಳುಹಿಸಬೇಕಾದರೆ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಸದರಿ ನೋಟಿಸಿಗೆ ಸಹಿ ಮಾಡಿರುತ್ತೇನೆ. ನಿಪಿ-**3** ನೋಟಿಸಿನಲ್ಲಿ ನನ್ನ ಸಹಿ ಇಲ್ಲ. ನಾನು ನೋಟಿಸ್ ಕಳುಹಿಸಿದ ನಂತರ ಆರೋಪಿ ಹಾಗೂ ನನ್ನ ನಡುವೆ ಯಾವುದೇ ಸಂಭಾಷಣೆ ಅಥವಾ ಹಣ ಪಾವತಿ ಬಗ್ಗೆ ಯಾವುದೇ ಮಾತುಕತೆ ಅಗಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ನಿವೃತ್ತಿಯಾದ ಸಮಯದಲ್ಲಿ ಅಂದಾಜು ರೂ. **9,50,000/-** ಹಣ ಬಂದಿರುತ್ತದೆ. ಸದರಿ ಹಣ ಬಂದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ಆರೋಪಿಗೆ ಕೊಟ್ಟೆ ಎಂದು ಹೇಳುವ ರೂ. **3,40,000/-** ಹಣ ನನ್ನ ಬಳಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಆರೋಪಿಗೆ ಕೊಟ್ಟೆ ಎಂದು ಹೇಳುವ ಹಣದ ಬಗ್ಗೆ ಯಾವುದಾದರೂ ಡೈರಿ ಅಥವಾ ಪುಸ್ತಕದಲ್ಲಿ ಬರೆದು ಇಟ್ಟಿಲ್ಲ. ನಿವೃತ್ತಿಯಾದ ನಂತರ ಬಂದ ಹಣದಲ್ಲಿ ನಾನು ಆರೋಪಿಗೆ ಸಾಲ ಕೊಟ್ಟೆ ಎಂಬ ವಿಚಾರವನ್ನು ನನ್ನ ನೋಟಿಸ್, ದೂರು, ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ.

ಆರೋಪಿ ಎನು ವಿದ್ಯಾಭ್ಯಾಸ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಆರೋಪಿಗೆ ಯಾವ ತರಹದ ಆಸ್ತಿ ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. **2019-20** ರಲ್ಲಿ ಆರೋಪಿಗೆ ತಿಂಗಳಿಗೆ **40** ಸಾವಿರ ರೂ. ಸಂಬಳ ಬರುತ್ತಿತ್ತು. ಆ ಬಗ್ಗೆ ನಾನು ಆರೋಪಿಯ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ಆರೋಪಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ನಾನು ಆರೋಪಿಯ ಮನೆಗೆ ಯಾವತ್ತು ಹೋಗಿಲ್ಲ. ಸಾಕ್ಷಿಗೆ ಸಿಸಿ.**6269/2021** ರಲ್ಲಿನ ದೂರು ಹಾಗೂ ಪ್ರಮಾಣೀಕೃತ ಹೇಳಿಕೆಯ ದೃಢಿಕೃತ ನಕಲುಗಳನ್ನು ತೋರಿಸಿ, ಆರೋಪಿಯ ತಮ್ಮ ಗಿರೀಶನ ವಿರುದ್ದ ರೂ.**3,60,000/-** ಹಣಕ್ಕಾಗಿ ದೂರು

ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಹೌದು ಎಂದು ನುಡಿದಿದ್ದರಿಂದ ಸದರಿ ದೂರು ಹಾಗೂ ಪ್ರಮಾಣೀಕೃತ ಹೇಳಿಕೆಗಳನ್ನು ಒಟ್ಟಾಗಿ ನಿಡಿ-**1** ಎಂದು ಗುರುತಿಸಲಾಯಿತು. ಆರೋಪಿಯ ತಮ್ಮ ನನ್ನ ಗ್ರಾಮದ ವಾಸಿಯಾಗಿರುವುದಿಲ್ಲ.

ಆರೋಪಿಗೆ ರೂ. **3,40,000/-** ಹಣವನ್ನು ಸಾಲವಾಗಿ ಕೊಟ್ಟೆ ಎಂದು ಹೇಳುವ ದಿನ ಆರೋಪಿಯಿಂದ ನಿಪಿ-**1** ಚೆಕ್ ಅಥವಾ ಇನ್ನಿತರ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಗೆ ಸಾಲ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಬಡ್ಡಿ ವಿಧಿಸುವ ಯಾವುದೇ ಮಾತುಕತೆ ನನ್ನ ಹಾಗೂ ಆರೋಪಿಯ ನಡುವೆ ನಡೆದಿರುವುದಿಲ್ಲ.

ಆರೋಪಿ ನನಗೆ ದಿ.**19.03.2020** ರಂದು ಚೆಕ್ ಕೊಟ್ಟಿರುತ್ತಾರೆ. ಸದರಿ ಸಮಯದಲ್ಲಿ ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆರೋಪಿ ನನಗೆ ಕೆಎಂ ದೊಡ್ಡಿಯ ಬ್ಯಾಂಕ್ ಅಫ್ ಬರೋಡಾ ಬ್ಯಾಂಕಿನ ಬಳಿ ಮಧ್ಯಾಹ್ನ **3.00** ಗಂಟೆಗೆ ನಿಪಿ-**1** ರ ಚೆಕ್ ಕೊಟ್ಟಿರುತ್ತಾರೆ. ದಿ.**19.03.2020** ರಂದು ಮಧ್ಯಾಹ್ನ **3.30** ಸಮಯದಲ್ಲಿ ನಿಪಿ-**1** ಚೆಕ್ ನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ನಿಪಿ-**1** ರಲ್ಲಿರುವ ಒಕ್ಕಣೆಗಳನ್ನು ಆರೋಪಿಯೇ ಬರೆದಿರುತ್ತಾರೆ. ನಿಪಿ-**1** ರಲ್ಲಿರುವ ಬರವಣಿಗೆಗಳು ಆರೋಪಿಯ ಕೈ ಬರವಣಿಗೆಯಲ್ಲಿರುತ್ತದೆ ಎಂದು ಖಾತ್ರಿ ಪಡೆಸಿಕೊಳ್ಳಲು ಕೈ ಬರಹಗಾರರ ತಜ್ಞರಿಗೆ ನಿಪಿ-**1** ನ್ನು ಕಳುಹಿಸಿಕೊಡಲು ನನ್ನ ಅಭ್ಯಂತರವಿರುವುದಿಲ್ಲ.

ನಿಡಿ-**1** ಕ್ಕೆ ಸಂಬಂಧಿಸಿದಂತೆ ಚೆಕ್ ನ ಒಕ್ಕಣೆಗಳನ್ನು ಆರೋಪಿಯೇ ಬರೆದಿರುತ್ತಾರೆ. ನಿಪಿ-**1** ಮತ್ತು ನಿಡಿ-**1** ಕ್ಕೆ ಸಂಬಂಧಿಸಿದ ಚೆಕ್ ನ ಬರವಣಿಗೆಗಳು ಆರೋಪಿಯದ್ದಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಬ್ಯಾಂಕ್ ಅಫ್ ಬರೋಡಾ ದಲ್ಲಿ ನನ್ನ ಖಾತೆ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಕೆಎಂ ದೊಡ್ಡಿಯ ಬ್ಯಾಂಕ್ ಅಫ್ ಬರೋಡಾ ದಲ್ಲಿ ನನಗೆ ಸೇರಿದ ಯಾವುದೇ ಖಾತೆ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಮತ್ತು ಆರೋಪಿಯ ತಮ್ಮನಿಗೆ ಕೊಟ್ಟೆನೆಂದು ಹೇಳುವ ಹಣ ಕೊಡಲು ನನಗೆ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ

ಸರಿಯಲ್ಲ. ನನಗೆ ತಿಂಗಳಿಗೆ ರೂ.**2,650/-** ಗಳ ನಿವೃತ್ತಿ ವೇತನ ಬರುತ್ತಿದೆ. ಆರೋಪಿಗೆ ಹಣ ಕೊಟ್ಟೆನೆಂದು ಹೇಳುವ ಸಮಯದಲ್ಲಿ ಯಾವುದೇ ಪ್ರತ್ಯಕ್ಷ ಸಾಕ್ಷಿಗಳು ಇರಲಿಲ್ಲ. ನಾನು ಆರೋಪಿಗೆ ನಗದು ರೂಪದಲ್ಲಿ ಹಣ ಕೊಟ್ಟಿರುತ್ತೇನೆ.

ಕೆಎಂ ದೊಡ್ಡಿ ಹಾಗೂ ಚಿಕ್ಕರಸಿನಕೆರೆ ಗ್ರಾಮಗಳ ನಡುವೆ ಸುಮಾರು **6** ಕಿ ಮೀ ಅಂತರವಿರುತ್ತದೆ. ಆರೋಪಿ ಬ್ಯಾಂಕ್ ಅಫ್ ಬರೋಡಾ, ಕೆ ಎಂ ದೊಡ್ಡಿ ಶಾಖೆಯಲ್ಲಿ ಕೆಲಸ ಮಾಡುತ್ತಾರೆ. ಆರೋಪಿಯ ತಮ್ಮ ಚಿಕ್ಕರಸಿನಕೆರೆಯ ಬ್ಯಾಂಕ್ ಅಫ್ ಬರೋಡಾ ಶಾಖೆಯಲ್ಲಿ ಕೆಲಸ ಮಾಡುತ್ತಾರೆ. ಜೂನ್ **2020** ತಿಂಗಳಲ್ಲಿ ಕೊರೊನಾ ವೈರಸ್ ಸಂಬಂಧಿಸಿದಂತೆ ದೇಶದ್ಯಾಂತ ಲಾಕ್ ಡೌನ್ ಇತ್ತು ಎಂದರೆ ನನಗೆ ಗೊತ್ತಿಲ್ಲ.

ನಾನು ಷೇರು ಮಾರುಕಟ್ಟೆ, ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿಲ್ಲ. ನನಗೆ ಯಾವುದೇ ಕಾನೂನು ಬಾಹಿರ ಚಟುವಟಿಕೆಯಿಂದ ಆದಾಯ ಇಲ್ಲ. ನಾನು ಬ್ಯಾಂಕ್ ಅಫ್ ಬರೋಡಾ, ಕೆ ಎಂ ದೊಡ್ಡಿ ಶಾಖೆಯಲ್ಲಿ ಖಾತೆ ಹೊಂದಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ಆರೋಪಿ **3,40,000/-** ರೂ. ಗಳನ್ನು ಸಾಲವಾಗಿ ನನ್ನ ಬಳಿ ಕೇಳಿಲ್ಲ, ನಾನು ಅವರಿಗೆ ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಂಡ್ಯ ನಗರದ ಸ್ವರ್ಣಸಂದ್ರ ಅಥವಾ ಗುತ್ತಲು ಕಾಲೋನಿಯಲ್ಲಿ ವಾಸಿಯಾಗಿರುವ ನಾಗರತ್ನ ನನಗೆ ಗೊತ್ತಿಲ್ಲ. ಸದರಿ ನಾಗರತ್ನ ನನ್ನ ಪರಿಚಯಸ್ಥರು ಮತ್ತು ಸಂಬಂಧಿಕರು ಎಂದರೆ ಸರಿಯಲ್ಲ. ನಾನು ನಾಗರತ್ನರವರಿಂದ ನಿಪಿ-**1** ಚೆಕ್ ಹಾಗೂ ನಿಡಿ-**1** ಕ್ಕೆ ಸಂಬಂಧಿಸಿದ ಚೆಕ್ ನ್ನು ಪಡೆದುಕೊಂಡು ಆರೋಪಿ ಹಾಗೂ ಆರೋಪಿ ತಮ್ಮನ ವಿರುದ್ದ ಸುಳ್ಳು ಕೇಸುಗಳನ್ನು ದಾಖಲು ಮಾಡಿರುತ್ತೀರಿ ಎಂದರೆ ಸುಳ್ಳು. (ಆರೋಪಿ ಪರ ವಕೀಲರು ಮೇಲ್ಕಂಡ ಸೂಚನ್ಮಾತಕ ಪ್ರಶ್ನೆ ಮಾಡಿದಾಗ ಸಾಕ್ಷಿಯು ಸಿಟ್ಟಿನಿಂದ ಕೈ ತೋರಿಸುತ್ತಾ ನಾಗರತ್ನ ಎನ್ನುವವರು ನನಗೆ ಗೊತ್ತಿಲ್ಲವೆಂದು ಹೇಳಿದ್ದರೂ ಮತ್ತೆ ಪ್ರಶ್ನೆ ಮಾಡುತ್ತೀರಾ ಎಂದು ತಿರುಗುತ್ತರ ನೀಡಿರುತ್ತಾರೆ). ನಾನು ನಾಗರತ್ನರವರ ಚಿತಾವಣೆಯ ಮೇರೆಗೆ ಆರೋಪಿ ಹಾಗೂ ಆರೋಪಿಯ ತಮ್ಮನ ವಿರುದ್ದ ಸುಳ್ಳು ದೂರುಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ದಿ.**20.12.2015** ರಂದು ನಡೆದ ರೂ. ಒಂದು ಲಕ್ಷ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ

ಆರೋಪಿಯು ನಿಪಿ-**1** ಚೆಕ್ ನಾಗರತ್ನರವರಿಗೆ ನೀಡಿದ್ದರು ಎಂದರೆ ಗೊತ್ತಿಲ್ಲ. ನಿಡಿ-**1** ಕ್ಕೆ ಸಂಬಂಧಿಸಿದ ಚೆಕ್ ನ್ನು ಆರೋಪಿಯು ದಿ.**19.11.2015** ರಂದು ನಾಗತ್ನರವರಿಂದ **50,000/-** ಹಣ ಪಡೆದಕ್ಕಾಗಿ ನಾಗರತ್ನರವರಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚೀಟಿ ವ್ಯವಹಾರ ಮುಗಿದ ನಂತರ ನಾಗರತ್ನರವರಿಂದ ನಿಪಿ-**1** ಮತ್ತು ನಿಡಿ-**1** ಕ್ಕೆ ಸಂಬಂಧಿಸಿದ ಚೆಕ್ ನ್ನು ಪಡೆದುಕೊಂಡು ಅಕ್ರಮ ಹಣ ಪಡೆಯುವುದಕ್ಕಾಗಿ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಹಾಗೂ ನಾಗರತ್ನರವರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಪೊಲೀಸರು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಬುದ್ಧಿವಾದ ಹೇಳಿ ಕಳುಹಿಸಿದರು ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮವಾಗಿ ಹಣ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ನಾಗರತ್ನರವರು ಮಂಡ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. **2020** ರಲ್ಲಿ ವಿಜಯಾ ಬ್ಯಾಂಕ್ ಬ್ಯಾಂಕ್ ಅಫ್ ಬರೋಡಾ ಅಗಿ ಬದಲಾದ ನಂತರ ನಾಗರತ್ನರವರಿಂದ ಚೆಕ್ ಗಳನ್ನು ಪಡೆದುಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಅಜಿತ್ ದೇವರಮನಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಮದ್ದೂರು**

ಸಾಕ್ಷಿ ಸಹಿಃ